# ಕುವೆಂಪು ವಿಶ್ವವಿದ್ಯಾಲಯ

## ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ

ನಿರ್ದೇಶಕರ ಕಾರ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ
ಶಿವಮೊಗ್ಗ-577451,
ಕರ್ನಾಟಕ

ನಿರ್ದೇಶಕರು

ಸಂಖ್ಯೆ:ಕುವಿ/ಪಿ.ಎಂ.ಇ.ಬಿ-1/ ಕ ತ್ರ /2020-21 ದಿನಾಂಕ:31-12-2020

## ಸುತ್ತೋಲೆ

ವಿಷಯ:- **Life Skills (Personality Development) Course** ತರಗತಿಗಳ ಕುರಿತು.

ಉಲ್ಲೇಖ:- ಮಾನ್ಯ ಕುಲಸಚಿವರ ಅನುಮೋದನೆ ದಿನಾಂಕ:31-12-2020

-**-

2020-20ನೇ ಶೈಕ್ಷಣಿಕ ವರ್ಷದ ಸ್ನಾತಕೋತ್ತರ ದ್ವಿತಿಯ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ **Life Skillls (Personality Development)**ಕೋರ್ಸ್‌ನ ತರಗತಿಗಳು ದಿನಾಂಕ:**04-01-2021**ರಂದು ವಿಶ್ವವಿದ್ಯಾಲಯದ ಬಸವ ಸಭಾಂಗಣದಲ್ಲಿ ಸಮಯ:**9:00**ರಿಂದ **6.00**ರವರೆಗೆ ಏರ್ಪಡಿಸಿದ್ದು, ಉಳಿದ ವಿವರಗಳು ಕೆಳಗಿನಂತಿವೆ.

01. ಸದರಿ ವಿಷಯವನ್ನು ವಿಭಾಗದ ಮುಖ್ಯಸ್ಥರು ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ತಿಳಿಸಲಾಗಿದೆ. ತರಗತಿ ನಡೆಯುವ ದಿನಾಂಕದಂದು ವಿದ್ಯಾರ್ಥಿಗಳ ಜೊತೆಗೆ ಒಬ್ಬರು ಪ್ರಾಧ್ಯಾಪಕರು ಅಥವಾ ವಿಭಾಗದ ಕಛೇರಿಯ ಸಹಾಯಕರೊಂದಿಗೆ ತರಗತಿ ನಡೆಯುವ ಸ್ಥಳಕ್ಕೆ ಕಡ್ಡಾಯವಾಗಿ ಹಾಜರಾಗಿ ತಮ್ಮ ವಿಭಾಗದ ವಿದ್ಯಾರ್ಥಿಗಳ ಹಾಜರಾತಿಯನ್ನು ಪಡೆದುಕೊಂಡು ಹಾಜರಾತಿಯನ್ನು ಅಂದೇ ಪಿ.ಎಂ.ಇ. ಮಂಡಳಿಗೆ ಸಲ್ಲಿಸುವುದು.
02. ವಿದ್ಯಾರ್ಥಿಗಳು ನಿಗದಿತ ಸಮಯಕ್ಕೆ 10 ನಿಮಿಷ ಮುಂಚಿತವಾಗಿ ಕಾರ್ಯಕ್ರಮ ನಡೆಯುವ ಸಭಾಂಗಣದಲ್ಲಿ ಹಾಜರಿರಬೇಕು. ವಿದ್ಯಾರ್ಥಿಗಳು ಶಿಸ್ತು ಮತ್ತು ಸಂಯಮದಿಂದ ವರ್ತಿಸಬೇಕು.
03. **CBCS ವಿನಿಮಯದ ಪ್ರಕಾರ ಈ ಕಾರ್ಯಕ್ರಮಕ್ಕೆ 2 ಕ್ರೆಡಿಟ್ಸ್‌ಗಳನ್ನು ನಿಗದಿಗೊಳಿಸಿದ್ದು, ವಿದ್ಯಾರ್ಥಿಗಳು ಇದರಲ್ಲಿ ಪೂರ್ಣವಾಗಿ ಪಾಲ್ಗೊಂಡು ಕ್ರೆಡಿಟ್ಸ್‌ಗಳನ್ನು ಗಳಿಸಿಕೊಳ್ಳಬೇಕು, ತಪ್ಪಿದಲ್ಲಿ ಅವರುಗಳ ಪರೀಕ್ಷಾ ಫಲಿತಾಂಶ ಪ್ರಕಟವಾಗುವುದಿಲ್ಲಾ.**
04. **ಕಳೆದ ಸಾಲಿನ ತಮ್ಮ ವಿಭಾಗದ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಯಾರಾದರು ಇದುವರೆಗೂ ಲೈಫ್ ಸ್ಕಿಲ್ ಕೋರ್ಸನ್ನು ತೆಗೆದುಕೊಳ್ಳದೆ ಇರುವಂತಹ ವಿದ್ಯಾರ್ಥಿಗಳು ಈ ತರಬೇತಿಯಲ್ಲಿ ಭಾಗವಹಿಸಬಹುದಾಗಿದೆ. ಇಂತಹ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಕಳುಹಿಸುವುದು.**
05. ಈ ಸಂಬಂಧ ತಮ್ಮ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿಗಳ ವಿವರವಾದ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ( SL No./ Exam Reg. No./Name of the Student) ಗಳ ಪಟ್ಟಿಯೊಂದಿಗೆ ಭರ್ತಿಮಾಡಿ ದಿನಾಂಕ:02-01-2021ರೊಳಗಾಗಿ(Hard/Soft Copy)ಯೊಂದಿಗೆ ಪಿ.ಎಂ.ಇ. ಮಂಡಳಿಗೆ ಕಳುಹಿಸತಕ್ಕದ್ದು.

ಈ ಸುತ್ತೋಲೆಯ ಮಾಹಿತಿಯನ್ನು ನಿಮ್ಮ ಗಮನಕ್ಕೆ ತರುತ್ತಾ, ಇದನ್ನು ನಿಮ್ಮ ವಿಭಾಗದ ದ್ವಿತೀಯ ವರ್ಷದ ಎಲ್ಲಾ ವಿದ್ಯಾಥಿಗಳ ಗಮನಕ್ಕೆ ತಂದು ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗುವಂತೆ ತಿಳಿಸುವುದು.

**ವಿಶೇಷ ಸೂಚನೆ:- ವಿದ್ಯಾರ್ಥಿಗಳು/ಅಧ್ಯಾಪಕರು/ಸಹಾಯಕರು ಮಾಸ್ಕ್‌ನ್ನು ಕಡ್ಡಾಯವಾಗಿ ಧರಿಸುವುದರೊಂದಿಗೆ ಕೋವಿಡ್ -19 ನಿಯಮವನ್ನು ಪಾಲಿಸುವುದು.**

31/12/2020

ಉಪನಿರ್ದೇಶಕರು
ಯೋಜನೆ, ಮೇಲ್ವಿಚಾರಣೆ ಹಾಗೂ
ಮೌಲ್ಯಮಾಪನ ಮಂಡಳಿ
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

ಗೆ,

ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ/ಶಿವಮೊಗ್ಗ/ಕಡೂರು

01. ಕುಲಸಚಿವರು (ಮೌಲ್ಯಮಾಪನ), ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
02. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
03. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
04. ಆಪ್ತಸಹಾಯಕರು,: ಕುಲಪತಿಗಳು: ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
05. ನಿರ್ದೇಶಕರು, ಯು.ಸಿ.ಸಿ.ಎಫ್. ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
06. ಕಛೇರಿ ಪ್ರತಿ.